ಇ) ಈ ಯೋಜನೆಯ ಉಪಯೋಗ ಹೊಂದಲು ಸಾಕಷ್ಟು ಅಲ್ಪಸಂಖ್ಯಾತರ ಪಂಗಡದವರುಗಳು ಮುಂದೆ ಬರದಿರುವುದು ನಿಜವೇ, ಹಾಗಿದ್ದಲ್ಲಿ ಇದಕ್ಕೆ ಕಾರಣಕೊಡಿ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆಂಗ್ಲೋ ಇಂಡಿಯನ್ ಪಂಗಡದವರು ಈ ಕೆಳಕಂಡ ಯೋಜನೆಗಳಲ್ಲಿ ಸೌಲಭ್ಯಗಳನ್ನು ಪಡೆಯಬಹುದು.

1. ಸ್ವಾವಲಂಬನ ಯೋಜನೆ
2. ವಾಹನ ಚಾಲನಾ ತರಬೇತಿ ಯೋಜನೆ
3. ಫೋರ್‌ಮನ್‌ಶಿಪ್ ತರಬೇತಿ ಯೋಜನೆ
4. ಕಂಪ್ಯೂಟರ್ ಟ್ರೈನಿಂಗ್ ಯೋಜನೆ.

ಆ) ಆಂಗ್ಲೋ ಇಂಡಿಯನ್‌ರನ್ನು ಒಳಗೊಂಡಂತೆ ಸೌಲಭ್ಯಗಳನ್ನು ಪಡೆದುಕೊಂಡಿರುವ ಕ್ರಿಶ್ಚಿಯನ್ ಜನಾಂಗದವರ ವಿವರಗಳು ಕೆಳಕಂಡಂತಿವೆ:

ಸ್ವಾವಲಂಬನ ಯೋಜನೆ	-	360
ವಾಹನ ಚಾಲನಾ ತರಬೇತಿ ಯೋಜನೆ	-	339
ಫೋರ್‌ಮನ್‌ಶಿಪ್ ತರಬೇತಿ	-	007
ಕಂಪ್ಯೂಟರ್ ಟ್ರೈನಿಂಗ್	-	003

ಇ) ನಿಜವಲ್ಲ - ನಿಗಮದ ಎಲ್ಲಾ ಯೋಜನೆಗಳಿಗೂ ಹೆಚ್ಚಿನ ಬೇಡಿಕೆ ಇದ್ದು ಅಲ್ಪಸಂಖ್ಯಾತರ ಪಂಗಡದವರು ಎಲ್ಲಾ ಯೋಜನೆಗಳನ್ನು ಅತ್ಯುತ್ತಮವಾಗಿ ಉಪಯೋಗಿಸಿಕೊಂಡಿರುತ್ತಾರೆ.

ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪರಿಷ್ಕರಿಸುವುದು

3729 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅನೇಕ ವರ್ಷಗಳಿಂದ ಟೋಬಾಕೋ ಮತ್ತು ಬೀಡಿ ಉದ್ದಿಮೆಯ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪರಿಷ್ಕರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಯಾವಾಗ ಪರಿಷ್ಕರಿಸಲಾಗುವುದು ?

ಇ) ಕನಿಷ್ಠ ವೇತನದ ಬಗ್ಗೆ ಕಾರ್ಮಿಕ ಆಯುಕ್ತರು ಮುಂದೆ ಒಂದು ಒಪ್ಪಂದವಾಗಿದ್ದರೂ ಆದನ್ನು ಅನುಷ್ಠಾನಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ಹೌದು

ಆ) ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಯಲ್ಲಿನ ಬೀಡಿ ಕಾರ್ಮಿಕರಿಂದ ದೂರುಗಳನ್ನು ಸ್ವೀಕರಿಸಲಾಗಿದೆ. ಒಪ್ಪಂದಗಳನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.